# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ, ನಂಜನಗೂಡು

**ಸಿ.ಸಿ ನಂ.1005-2018** **ಪಿ. ಡಬ್ಲ್ಯುಃ 1**

| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಸುಬ್ರಮಣ್ಯ<br>ನಂಜನಗೂಡು |
|---|---|
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 11-10-2021. |

**ಪಾಟೀ ಸವಾಲುಃ ಶ್ರೀ ಎನ್.ಎಸ್.ಸಿ.ಕೆ ವಕೀಲರಿಂದಃ**

ನಾನು ಬಣ್ಣಾರಿಯಮ್ಮ ಶುಗರ್ ಕಾರ್ಖಾನೆಯಲ್ಲಿ ಡೆಪ್ಯೂಟಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿ. ಆರೋಪಿ ಸಹ ಸದರಿ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಅಕ್ಟೋಬರ್-2017 ರಿಂದ ಆರೋಪಿ ಸದರಿ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿಲ್ಲ. ಮಹದೇವು ಬಿನ್ ಲೇಟ್ ಈರಯ್ಯ ಎಂಬುವವರು ನಮ್ಮ ಕಾರ್ಖಾನೆಯಲ್ಲಿ ಚಾಲಕನಾಗಿ ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿ. ಅವರು ಕೂಡ ನನ್ನ ಸ್ನೇಹಿತರು ಎಂದರೆ ಸರಿ. ದಿ.10-05-2017 ರಲ್ಲಿ ನಾನು ಆರೋಪಿಗೆ ಸಾಲ ನೀಡಿದ್ದೆ. ಈ ವಿಚಾರವನ್ನು ನಾನು ನನ್ನ ಪಿರ್ಯಾದಿ ಹಾಗೂ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿದ್ದೇನೆ ಇದೆ ಮೊದಲ ಬಾರಿಗೆ ನಾನು ಮೇಲೆ ಹೇಳಿದ ದಿನಾಂಕವನ್ನು ನ್ಯಾಯಾಲಯದ ಮುಂದೆ ಹೇಳುತ್ತಿದ್ದೇನೆ ಎಂದರೆ ಸರಿ. ಆರೋಪಿ ನಂಜನಗೂಡಿನ ಎನ್.ಜಿ.ಒ ಕಾಲೋನಿಯಲ್ಲಿ ಮನೆ ಕಟ್ಟಿಸಿಸುತ್ತಿದ್ದು ಆ ಸಂಬಂಧ ಹಣ ಬೇಕೆಂದು ಹೇಳಿ ನನ್ನ ಬಳಿ ಸಾಲ ಪಡೆದಿದ್ದಹಾಗೂ ಅದನ್ನು 6 ತಿಂಗಳಲ್ಲಿ ಮರುಪಾವತಿ ಮಾಡುವುದಾಗಿ ತಿಳಿಸಿದ್ದ. ಆರೋಪಿ ನಾನು ಸಾಲ ನೀಡುವ ಪೂರ್ವ 1 ತಿಂಗಳ ಹಿಂದೆ ಆ ರೀತಿ ಬೇಡಿಕೆ ಇಟ್ಟಿದ್ದ. ನೀವು ನಿಮ್ಮ ಪಿರ್ಯಾದಿನಲ್ಲಿ ಹೇಳಿರುವ ಮನೆಯನ್ನು ಕಟ್ಟಿಸುವ ಸಾಲುವಾಗಿ ಆರೋಪಿ ಸಾಲ ಪಡೆದಿದ್ದರಾ ಎಂದರೆ ಸಾಕ್ಷಿಯು ವಿಳಾಸವನ್ನು ನನಗೆ ನಿಖರವಾಗಿ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿ ಆ ರೀತಿ ಯಾವುದೇ ಮನೆ ಕಟ್ಟಸುತ್ತಿರಲಿಲ್ಲ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನಾನು ನನ್ನ ಉಳಿತಾಯದ ಹಣದಿಂದ ಸದರಿ

ಸಾಲ ನೀಡಿರುತ್ತೇನೆ. ಸಾಮಾನ್ಯವಾಗಿ ಯಾವುದೇ ಒಬ್ಬ ವ್ಯಕ್ತಿ ರೂ.25,000/- ಮೇಲ್ಪಟ್ಟು ಹಣವನ್ನು ನೀಡಬೇಕಾದರೆ ಚೆಕ್ ಅಥವಾ ಡಿ.ಡಿ ಮುಖಾಂತರ ನೀಡಬೇಕು ಎಂದರೆ ನನಗೆ ಗೊತ್ತಿಲ್ಲ. ಆರೋಪಿಗೆ ಸಾಲ ನೀಡಿದ ಬಗ್ಗೆ ನಾನು ನನ್ನ ಆದಾಯ ತೆರಿಗೆ ಘೋಷಣೆಯಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ನಾನು ಆರೋಪಿಗೆ ಸಾಲ ನೀಡಿಲ್ಲ ಎಂದರೆ ಸರಿಯಲ್ಲ.

2. 2016 ರಲ್ಲಿ ಆರೋಪಿ ನನ್ನ ಕಡೆಯಿಂದ ಕೇವಲ ರೂ.20,000/- ಗಳನ್ನು ಸಾಲವಾಗಿ ಪಡೆದಿದ್ದರು ಎಂದರೆ ಸರಿಯಲ್ಲ. ಆ ಸಾಲದ ಭದ್ರತೆಗೆಂದು ನಾನು ಆರೋಪಿ ಕಡೆಯಿಂದ 4 ಖಾಲಿ ಚೆಕ್ಕಗಳನ್ನು ಪಡೆದಿದ್ದೆ ಎಂದರೆ ಸರಿಯಲ್ಲ. ಆರೋಪಿ ಮೇಲೆ ಹೇಳಿದ ರೂ.20,000/- ಸಾಲವನ್ನು ಡಿಸೆಂಬರ್ 2016 ರಲ್ಲಿ ಮರುಪಾವತಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಆರೋಪಿ ತನ್ನ 4 ಚಕ್ಕುಗಳನ್ನು ವಾಪಸ್ಸು ನೀಡವಂತೆ ಕೇಳಿದ್ದರು ಆಗ ನಾನು ಆ ಚೆಕ್ಕುಗಳು ಸಿಗುತ್ತಿಲ್ಲ ಸಿಕ್ಕಿದ ಕೂಡಲೇ ನಿಡುತ್ತೇನೆ ಎಂದು ಹೇಳಿದ್ದೆ ಎಂದರೆ ಸರಿಯಲ್ಲ. ಆರೋಪಿ ನನ್ನ ಮೇಲೆ ನಂಬಿಕೆ ಇಟ್ಟು ಸಮ್ಮನಾದರು ಎಂದರೆ ಸರಿಯಲ್ಲ.

3. ಆರೋಪಿ ನಮ್ಮ ಕಾರ್ಖಾನೆಯಲ್ಲಿ ಕೆಲಸ ಬಿಟ್ಟಾಗ ಆತನಿಗೆ ಸುಮಾರು ಹಣ ಬರುತ್ತದೆ ಎಂಬ ವಿಚಾರ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಆರೋಪಿಗೆ ನನ್ನಿಂದ ರೂ.3,00,000/- ಸಾಲ ಪಡೆಯುವ ದರ್ದು ಇರಲಿಲ್ಲ, ಆತ ದಿ.01-03-2017 ರಲ್ಲಿ ತನ್ನ ಒಂದು ಮನೆಯನ್ನು ಮಾರಾಟ ಮಾಡಿದ್ದು ಅದರಿಂದ ಆತನಿಗೆ ರೂ.20,00,000/- ಹಣ ಬಂದಿತ್ತು ಎಂದರೆ ಸರಿಯಲ್ಲ. ಮೇಲೆ ಹೇಳಿದ 4 ಚೆಕ್ಕಗಳನ್ನು ದುರುಪಯೋಗ ಪಡಿಸಿಕೊಂಡು ಒಂದು ಈ ಪ್ರಕರಣವನ್ನು ನಾನು ಹಾಗು ಇನ್ನೂಳಿದ 3 ಚೆಕ್ಕುಗಳಿಗೆ ಸಿ.ಸಿ.796 ರಿಂದ 798 ರಂತೆ ಆರೋಪಿ ವಿರುದ್ಧ ಒಂದೇ ಹೆಚ್ಚುವರಿ ನ್ಯಾಯಾಲಯದಲ್ಲಿ ಮಹದೇವು ಎಂಬುವವರು ಕಡೆಯಿಂದ ಚೆಕ್ ಬೌನ್ಸ್‌ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಪಿರ್ಯಾದಿನಲ್ಲಿ ನೀಡಿರುವ ಆರೋಪಿ ವಿಳಾಸದಲ್ಲಿ ಆರೋಪಿ ವಾಸ ಇರಲಿಲ್ಲ ಅದು ನನಗೆ ಗೊತ್ತಿದ್ದರು ಸಹ ಅದೇ ವಿಳಾಸವನ್ನು ನಾನು ಬರೆಸಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ವಕೀಲರ ಮೂಲಕ ನೋಟಿಸ್ ನ್ನು ಆ ವಿಳಾಸಕ್ಕೆ ಕಳುಹಿಸಿದ್ದ ಕಾರಣ ಅದು ಆರೋಪಿಗೆ ಜಾರಿಯಾಗಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದು ಆರೋಪಿಯ ಸರಿಯಾದ ವಾಸದ ವಿಳಾಸ ಆಗಿದ್ದು ಅದಕ್ಕೆ ನಾನು ಲೀಗಲ್ ನೋಟಿಸ್ ನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನಿಪಿ-1(ಎ) ಎಂದು ಹೊರತುಪಡಿಸಿ ನಿಪಿ-1 ರಲ್ಲಿರುವ

ಬೇರೆ ಒಕ್ಕಣಿಕೆಗಳು ಆರೋಪಿ ಬರೆದಿಲ್ಲ ಎಂದರೆ ಸರಿಯಲ್ಲ. ಆರೋಪಿ ರೂ.20,000/- ಭದ್ರತೆಗೆಂದು ನೀಡಿದ್ದ ನಿಪಿ-1 ನ್ನು ದುರುಪಯೋಗ ಪಡಿಸಿಕೊಂಡು ಈ ಸುಳ್ಳು ಪ್ರಕರಣದ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನನಗೆ ರೂ.3,00,000/- ಪಾವತಿ ಮಾಡಲು ಭಾದ್ಯನಲ್ಲ ಎಂದರೆ ಸರಿಯಲ್ಲ. ಆರೋಪಿಗೆ ನಿನ್ನಂದ ಪಡೆದದ್ದ ರೂ.20,000/- ಸಾಲವನ್ನು ಮರುಪಾವತಿ ಮಾಡಿದ್ದಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**